**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.36/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ನಾಗಮ್ಮ.ಕೆ | ಪಿಡಬ್ಲ್ಯೂ | 18 |
| ಗಂಡನ ಹೆಸರು | ವಿಶ್ವನಾಥ | ಪಿಡಬ್ಲ್ಯೂ | 4 |
| ವಯಸ್ಸು | 44 ವರ್ಷ | | |
| ಉದ್ಯೋಗ | ಸಿ.ಪಿ.ಐ ಭದ್ರಾವತಿ ನಗರ ವೃತ್ತ | | |
| ವಾಸಸ್ಥಳ | ಭದ್ರಾವತಿ | | |

**ದಿಃ01.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 13.08.2020 ರಿಂದ ದಿನಾಂಕಃ 04.08.2023 ರವರೆಗೆ ಹಾವೇರಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಸಿ.ಪಿ.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 30.04.2021 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ-17 ರವರಿಂದ ಪಡೆದುಕೊಂಡಿದ್ದು, ಅದುವರೆಗಿನ ತನಿಖೆಯನ್ನು ಪರಿಶೀಲನೆ ಮಾಡಿರುತೆತೇನೆ. ನಾನು ಅನ್ಯ ಕರ್ತವ್ಯದ ಮೇಲೆ ಇದ್ದಾಗ ಮೃತ ಸರಸ್ವತೆವ್ವರವರ ಶವಪಂಚನಾಮೆ ಮಾಡುವಂತೆ ಚಾ.ಸಾ-17 ರವರಿಗೆ ಮೌಖಿಕ ಆದೇಶ ನೀಡಿರುತ್ತೇನೆ. ಅದೇ ದಿನ ಅಪಘಾತವಾದ ಸ್ದಳಕ್ಕೆ ಬೇಟಿ ನೀಡಿದ್ದು, ಚಾ.ಸಾ-13 ರವರು ತೋರಿಸಿದ ಸ್ದಳದಲ್ಲಿ ಚಾ.ಸಾ-5 ಮತ್ತು 6 ರವರ ಸಮಕ್ಷಮ ಮದ್ಯಾಹ್ನ 1-00 ರಿಂದ 2-00 ಘಂಟೆಯವರೆಗೆ ಘಟನಾ ಸ್ದಳದ ಪಂಚನಾಮೆಯನ್ನು ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, ಎರಡು ಪೋಟೋಗಳನ್ನು ತೆಗೆಯಿಸಿರುತ್ತೇನೆ.

2) ಅದೇ ದಿನ ಗುತ್ತಲ ಪೊಲೀಸ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ಗೂಡ್ಸ ವಾಹನವನ್ನು ಚಾ.ಸಾ-7 ಮತ್ತು 8 ರವರ ಸಮಕ್ಷಮ ಮಧ್ಯಾಹ್ನ 2-45 ರಿಂದ 3-45 ರವರೆಗೆ ಜಪ್ತು ಪಂಚನಾಮೆಯನ್ನು ಜರುಗಿಸಿ ಎರಡು ಪೋಟೋಗಳನ್ನು ತೆಗೆಯಿಸಿದ್ದೇನೆ. ಚಾ.ಸಾ-1 ರವರ ಮರುಹೇಳಿಕೆ, ಚಾ.ಸಾ-9 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 11.05.2021 ರಂದು ಚಾ.ಸಾ-16 ರವರಿಗೆ ಈ ಪ್ರಕರಣದಲ್ಲಿ ಜಪ್ತು ಮಾಡಿಕೊಂಡ ಒಂದು ವಾಹನದ ಮೋಟಾರ ವಾಹನ ನಿರೀಕ್ಷಣೆಯನ್ನು ಮಾಡಿ ಅದರ ಪ್ರಕಾರ ವರದಿಯನ್ನು ಸಲ್ಲಿಸಲು ಮನವಿ ಪತ್ರ ಸಲ್ಲಿಸಿದ್ದೇನೆ. 2 ನೇ ಆರೋಪಿಗೆ ಐ.ಎಂ.ವಿ ನೋಟಿಸನ್ನು ನೀಡಿ ಉತ್ತರ ಪಡೆದುಕೊಂಡಿದ್ದೇನೆ. ಚಾ.ಸಾ-15 ರವರಿಂದ ಪಿ.ಎಂ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

3) ದಿನಾಂಕಃ 12.05.2021 ರಂದು ಅಪಘಾತಪಡಿಸಿದ ವಾಹನದ ಮಾಲೀಕರಾದ 2 ನೇ ಆರೋಪಿಯಿಂದ ಇಂಡೆಮ್ನಿಟಿ ಬಾಂಡ ಪಡೆದು ಅವರ ಮಧ್ಯಂತರ ವಶಕ್ಕೆ ವಾಹನವನ್ನು ಬಿಡುಗಡೆ ಮಾಡಿದ್ದೇನೆ. ದಿನಾಂಕಃ 07.06.2021 ರಂದು ಚಾ.ಸಾ-16 ಇವರಿಂದ ಐ.ಎಂ.ವಿ ವರದಿಯನ್ನು ಪಡೆದು, ದಿನಾಂಕಃ 09.10.2021 ರಂದು ಸಿಬ್ಬಂದಿಯವರಿಂದ 65(ಬಿ) ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿನಾಂಕಃ 14.10.2021 ರಂದು ಚಾ.ಸಾ-14 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕಃ 17.01.2022 ರಂದು 1 ನೇ ಆರೋಪಿಗೆ ಸಂಬಂಧಿಸಿದ ಶಾಲಾ ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ

ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದೇನೆ.

4) ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ-4 ಮತ್ತು 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಸಿ) ಮತ್ತು 5(ಸಿ) ಎಂದು ಗುರುತಿಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಪೋಟೋಗಳನ್ನು ಈಗಾಗಲೇ ನಿ.ಪಿ-6 ಮತ್ತು 7 ಎಂದು ಗುರುತಿಸಲಾಗಿರುತ್ತದೆ. ಚಾ.ಸಾ-17 ಇವರಿಂದ ಸ್ವೀಕರಿಸಿದ ಶವಪಂಚನಾಮೆಯನ್ನು ನಿ.ಪಿ-8 ಎಂದು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ಗುರುತಿಸಲಾಯಿತು. ಶವಪರೀಕ್ಷಾ ವರದಿಯನ್ನು ನಿ.ಪಿ-9 ಎಂದು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ಗುರುತಿಸಲಾಯಿತು. ಐ.ಎಂ.ವಿ ವರದಿಯನ್ನು ನಿ.ಪಿ-10 ಎಂದು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ಗುರುತಿಸಲಾಯಿತು. ಜಪ್ತು ಪಂಚನಾಮೆಯನ್ನು ನಿ.ಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಪೋಟೋಗಳನ್ನು ಈಗಾಗಲೇ ನಿ.ಪಿ-2 ಮತ್ತು 3 ಎಂದು ಗುರುತಿಸಲಾಯಿತು .

5) 2 ನೇ ಆರೋಪಿಗೆ ನೀಡಿದ ಐ.ಎಂ.ವಿ ನೋಟಿಸ ಮತ್ತು ಉತ್ತರವನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿ.ಪಿ-12 ಮತ್ತು 13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಮತ್ತು ನಿ.ಪಿ-13(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿ ಬರೆದುಕೊಟ್ಟ ಇಂಡೆಮ್ನಿಟಿ ಬಾಂಡನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿ.ಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-14(ಎ) ಎಂದು

ಗುರುತಿಸಲಾಯಿತು. ಭಾರತೀಯ ಸಾಕ್ಷ ಅಧಿನಿಯಮ ಕಲಂ.65(ಬಿ) ದೃಢೀಕರಣ ಪತ್ರವನ್ನು ನಿ.ಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-15(ಎ) ಎಂದು ಗುರುತಿಸಲಾಯಿತು. 1 ನೇ ಅರೋಪಿಗೆ ಸಂಬಂಧಿಸಿದ ಶಾಲಾ ದೃಢೀಕರಣ ಪತ್ರವನ್ನು ನಿ.ಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-16(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

6) ಚಾ.ಸಾ-17 ರವರು ನನ್ನ ಅಧೀನ ಅಧಿಕಾರಿಯಾಗಿದ್ದು, ಅವರು ಈ ಪ್ರಕರಣದಲ್ಲಿ ಚಾ.ಸಾ-1 ರವರಿಂದ ದೂರನ್ನು ಸ್ವೀಕರಿಸಿಕೊಂಡು, ಗುತ್ತಲ ಪೊಲೀಸ ಠಾಣಾ ಗುನ್ನಾ ನಂಬರಃ 30/2021 ರ ಪ್ರಕಾರ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ನಾನು ಅವರ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿ.ಪಿ-1 ದೂರಿನಲ್ಲಿನ ಚಾ.ಸಾ-17 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿ.ಪಿ-1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿ.ಪಿ-17 ಎಂದು, ಚಾ.ಸಾ-17 ಇವರ ಸಹಿಯನ್ನು ನಿ.ಪಿ-17(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ.ಪಿ.ಎನ್.ಎ ವಕೀಲರಿಂದಃ 1 ನೇ ಆರೋಪಿ ಪರವಾಗಿಃ</u>**

7) ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂಪಟ್ಟಂತೆ ಚಾ.ಸಾ-17 ಇವರಿಂದ ದಿನಾಂಕಃ 30.04.2021 ರಂದು ಮದ್ಯಾಹ್ನ 12-00 ಘಂಟೆಗೆ ಕಡತವನ್ನು ಸ್ವೀಕರಿಸಿ ನಂತರ ಮುಂದಿನ ತನಿಖೆಯನ್ನು ಮುಂದುವರೆಯಿಸಿರುತ್ತೇನೆ. ಚಾ.ಸಾ-17 ಇವರು ಈ ಪ್ರಕರಣದಲ್ಲಿ ನಾನು

ಅವರಿಂದ ಕಡತವನ್ನು ಸ್ವೀಕರಿಸುವ ಪೂರ್ವದಲ್ಲಿ ಸದರಿ ಚಾ.ಸಾ-17 ಇವರು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ ಮತ್ತು ಮೃತ ಮಹಿಳೆಯಾದಂತಹ ಶ್ರೀಮತಿ ಸರಸ್ವತಿ ಇವರ ಶವಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿರುತ್ತಾರೆ. ನಾನು ಚಾ.ಸಾ-17 ಇವರಿಂದ ಕಡತವನ್ನು ಸ್ವೀಕರಿಸಿಕೊಂಡ ನಂತರ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಆರೋಪಿಯ ಹೆಸರು ಮತ್ತು ವಿಳಾಸದ ಗುರುತಿನ ಕುರಿತಾಗಿ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ.

8) ನಿ.ಪಿ-1 ದೂರಿನಲ್ಲಿ ಮತ್ತು ಶವಪಂಚನಾಮೆಯಲ್ಲಿ ಆರೋಪಿಯ ಹೆಸರು ಶಾಂತವೀರಪ್ಪ ಕಾಳೆ ಅಂತಾ ಇರುತ್ತದೆ ಅಂದರೆ ಸರಿ. ನಾನು ಆರೋಪಿಗೆ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ತನಿಖೆಗೆ ಹಾಜರಾಗುವಂತೆ ಭಾ.ದಂ.ಪ್ರ.ಸಂ ಕಲಂ. ನಮೂನೆ ನಂಬರಃ 29 ರ ಪ್ರಕಾರ ಚಾ.ಸಾ-17 ಇವರು ನೋಟಿಸನ್ನು ಕೊಟ್ಟಿರುತ್ತಾರೆ ಅಂದರೆ ಸರಿ. ಅದರಲ್ಲಿಯೂ ಸಹ ಆರೋಪಿಯು ಹೆಸರು ಶಾಂತವೀರಪ್ಪ ಕಾಳೆ ಎಂದು ನಮೂದಿಸಿ ನೋಟಿಸನ್ನು ಕೊಟ್ಟಿರುತ್ತಾರೆ ಅಂದರೆ ಸರಿ. ನಾನು ಮೊದಲು ಅಪಘಾತವಾದ ಸ್ಥಳಕ್ಕೆ ಬೇಟಿ ನೀಡಿ ಅಲ್ಲಿ ಪಂಚರ ಸಮಕ್ಷಮ ಅಲ್ಲಿ ಘಟನಾ ಸ್ಥಳದ ಪಂಚನಾಮೆ ಜರುಗಿಸಿ ನಂತರ ಪಿರ್ಯಾದಿದಾರರ ಮರುಹೇಳಿಕೆ ಪಡೆದಿರುತ್ತೇನೆ.

9) ನಾನು ಘಟನಾ ಸ್ಥಳದ ಪಂಚನಾಮೆಯನ್ನು ಬರೆಯುವಾಗ ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ಯಾವ ವ್ಯಕ್ತಿಗೆ ಸೇರಿದ ಕೃಷಿ ಜಮೀನಿನ ಪಕ್ಕದಲ್ಲಿ ಆಗಿರುತ್ತದೆ ಎಂದು ನಮೂದಿಸಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಕಚ್ಚಾ ನಕಾಶೆಯಲ್ಲಿ ನಾನು ಅಪಘಾತವಾದ ಸ್ಥಳವನ್ನು

ನಿಖರವಾಗಿ ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ತೋರಿಸಿರುವದಿಲ್ಲ ಅಂದರೆ ಸರಿ ಮತ್ತು ಸಾಕ್ಷಿಯು ಮುಂದುವರೆದು ಕಚ್ಚಾ ನಕಾಶೆಯಲ್ಲಿ ಅಪಘಾತವಾದ ಸ್ಥಳವನ್ನು ಪೊಲೀಸ ಠಾಣೆ ಅಂತಾ ಬರೆದು ತೋರಿಸಲಾಗಿದೆ ಎಂದು ನುಡಿಯುತ್ತಾರೆ ಮತ್ತು ಆ ವಿಷಯ ಕೈ ತಪ್ಪಿನಿಂದ ಆಗಿರುತ್ತದೆ ಎಂದೂ ಸಹ ನುಡಿಯುತ್ತಾರೆ.

10) ಕಚ್ಚಾ ನಕಾಶೆಯಲ್ಲಿ ಅಪಘಾತವಾದ ಸ್ಥಳವನ್ನು ನಾವು ಯಾವ ಸ್ಥಳದಲ್ಲಿ ನಿಖರವಾಗಿ ಆಗಿರುತ್ತದೆ ಎಂದು ತೋರಿಸದೇ, ಆ ಸ್ಥಳದ ಹೆಸರನ್ನು ಬರೆಯದೇ ಪೊಲೀಸ ಠಾಣೆ ಎಂದು ಬರೆದಿರುವದು ನಜರಚೂಕಿನಿಂದ ಆಗಿರುತ್ತದೆ ಎನ್ನುವ ಕುರಿತಾಗಿ ಅಂತಿಮ ವರದಿ ಸಲ್ಲಿಸುವಾಗ ಕಲಂ.12 ರಲ್ಲಿ ಕಾಣಿಸಿಲ್ಲ ಅಂದರೆ ಸರಿ. ಅದೇ ರೀತಿ ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ನಾವು ಅಪಘಾತವಾದ ಸ್ಥಳದ ಪಂಚನಾಮೆಯಲ್ಲಿ ಸದರಿ ಗುಡ್ಡಪ್ಪ ವಡ್ಡಿಕೊಪ್ಪ ಇವರಿಗೆ ಸೇರಿದ ಜಮೀನು ಅಪಘಾತವಾದ ಸ್ಥಳದ ರಸ್ತೆಯ ಯಾವ ದಿಕ್ಕಿನಲ್ಲಿ ಇರುತ್ತದೆ ಎನ್ನುವ ಕುರಿತಾಗಿ ಸದರಿ ಜಮೀನಿನ ಸರ್ವೆ ನಂಬರ ಮತ್ತು ಕ್ಷೇತ್ರ ಕಾಣಿಸಿಲ್ಲ ಅಂದರೆ ಸರಿ.

11) ನಿ.ಪಿ-1 ದೂರಿನಲ್ಲಿ ಅಪಘಾತವು ರಾಗಿ ಇವರಿಗೆ ಸೇರಿದ ಜಮೀನಿನ ಪಕ್ಕದಲ್ಲಿ ಇರುವಂತಹ ರಸ್ತೆಯ ಮೇಲೆ ಆಗಿರುತ್ತದೆ ಎಂದು ಬರೆಯಲಾಗಿದೆ ಅಂದರೆ ಸರಿ, ಸದರಿ ವಿಷಯವನ್ನು ನಾನು ಅಪಘಾತವಾದ ಸ್ಥಳದ ಪಂಚನಾಮೆಯನ್ನು ಜರುಗಿಸುವಾಗ ಬರೆದಂತಹ ಕಚ್ಚಾನಕಾಶೆಯಲ್ಲಿ ಕಾಣಿಸಿಲ್ಲ ಅಂದರೆ ಸರಿ. ಈ ಪ್ರಕರಣದಲ್ಲಿ ನಾನು ತೆಗೆದಂತಹ ಪೋಟೋಗಳನ್ನು ನಿ.ಪಿ-2,3,6 ಮತ್ತು 7 ಇವುಗಳಲ್ಲಿ ನಾನು ಮತ್ತು ಪಂಚರು ರಸ್ತೆಯ ಪಕ್ಕದಲ್ಲಿ ಇರುವಂತಹ ಮರದ ಕೆಳಗಡೆ ನಿಂತು ತೆಗೆದಂತಹ ಪೋಟೋಗಳಾಗಿರುತ್ತವೆ ಅಂದರೆ ಸಾಕ್ಷಿಯು ನಾವು ಪೋಟೋ

ತೆಗೆಯುವಾಗ ಮರದ ನೆರಳು ರಸ್ತೆಯ ಮೇಲೆ ಬಿದ್ದಿರುತ್ತದೆ ಎಂದು ನುಡಿಯುತ್ತಾರೆ.

12) ನಿ.ಪಿ-2 ಮತ್ತು 3 ಪೋಟೋಗಳನ್ನು ನಾವು ವಾಹನ ಜಪ್ತು ಪಂಚನಾಮೆಯನ್ನು ಮಾಡುವಾಗ ಸದರಿ ಪೋಟೋಗಳಲ್ಲಿ ಗೋಡೆಯ ನೆರಳು ಇರುತ್ತದೆ ಅಂದರೆ ಸರಿ. ನಾನು ಅಪಘಾತವಾದ ಸ್ಥಳದ ಪಂಚನಾಮೆಯಲ್ಲಿ ಸದರಿ ಅಪಘಾತವಾದ ಸ್ಥಳದಲ್ಲಿ ಇರುವ ರಸ್ತೆಯ ಪಕ್ಕದಲ್ಲಿ ಗಿಡಗಳು ಇರುತ್ತವೆ ಮತ್ತು ನಾನು ಈ ಪ್ರಕರಣದಲ್ಲಿ ಜಪ್ತು ಮಾಡಿದ ವಾಹನದ ಕುರಿತಾಗಿ ಜರುಗಿಸಿದ ವಾಹನ ಜಪ್ತು ಪಂಚನಾಮೆಯಲ್ಲಿಯೂ ಸಹ ಪೊಲೀಸ ಠಾಣೆಯಲ್ಲಿ ಗೋಡೆ ಇರುತ್ತದೆ ಎನ್ನುವ ಕುರಿತಾಗಿ ಬರೆದಿಲ್ಲ ಅಂದರೆ ಸರಿ. ನಾನು ವಾಹನ ಜಪ್ತು ಪಂಚನಾಮೆಯಲ್ಲಿ ಪೋಟೋಗಳನ್ನು ತೆಗೆಯುವಾಗ ಕಟ್ಟಡದ ಗೋಡೆಯ ನೆರಳು ಇರುವ ಬಗ್ಗೆ ಕಾಣಿಸಿಲ್ಲ ಅಂದರೆ ಸರಿ.

13) ಅದೇ ರೀತಿ ಅಪಘಾತವಾದ ಸ್ಥಳದ ಪಂಚನಾಮೆಯನ್ನು ಜರುಗಿಸುವಾಗ ತೆಗೆದಂತಹ ಕಚ್ಚಾ ನಕಾಶೆಯಲ್ಲಿ ಅಪಘಾತವಾದ ಸ್ಥಳದ ರಸ್ತೆಯ ಪಕ್ಕದಲ್ಲಿ ಮರಗಳು ಇರುತ್ತವೆ ಎನ್ನುವ ಕುರಿತಾಗಿ ಕಾಣಿಸಿಲ್ಲ ಅಂದರೆ ಸರಿ. ನಾನು ಈ ಪ್ರಕರಣದಲ್ಲಿ ಜರುಗಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಮತ್ತು ವಾಹನ ಜಪ್ತು ಪಂಚನಾಮೆಯನ್ನು ಬೇರೆ ಸ್ಥಳದಲ್ಲಿ ಮಾಡಿ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಅವುಗಳನ್ನು ತಯಾರಿಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ.

14) ನಾನು ಪಿರ್ಯಾದಿದಾರರ ಮರುಹೇಳಿಕೆಯನ್ನು ಪಡೆಯುವಾಗ ಈ ಪ್ರಕರಣದ ಆರೋಪಿಯ ಹೆಸರು ಶಾಂತವೀರಪ್ಪ ಕಾಳೆ ಅಂತಾ ಇರುವದಿಲ್ಲ ಎನ್ನುವ ವಿಷಯ ನನಗೆ ತಿಳಿದು ಬಂದಿದ್ದರೂ ಸಹ ನಾನು

ಈ ಪ್ರಕರಣದಲ್ಲಿ 1 ನೇ ಆರೋಪಿ ಪ್ರವೀಣ ಕಾಳೆ ಅಂತಾ ಸುಳ್ಳಾಗಿ ಅಂತಿಮ ವರದಿಯಲ್ಲಿ ಸೇರಿಸಿರುತ್ತೇನೆ ಅಂದರೆ ಸರಿಯಲ್ಲ. ಅದಲ್ಲದೇ ನನ್ನ ಸಂಪೂರ್ಣ ತನಿಖೆಯಲ್ಲಿ 1 ನೇ ಆರೋಪಿಯು ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂದಪಟ್ಟಿಲ್ಲ, ಆದರೆ ಮೂಲ ಆರೋಪಿಯ ಹೆಸರು ಬೇರೆ ಇರುತ್ತದೆ ಎನ್ನುವ ಕುರಿತಾಗಿ ಕಂಡು ಬಂದಿರುತ್ತದೆ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆ, ಅದೇ ರೀತಿ ಪ್ರಕರಣಕ್ಕೆ ಸಂಬಂದಪಟ್ಟಂತೆ ಎಲ್ಲ ವೈದ್ಯಕೀಯ ದಾಖಲಾತಿಗಳನ್ನು ಮತ್ತು ಜಪ್ತು ಪಡಿಸಿದ ವಾಹನಕ್ಕೆ ಸಂಬಂದಪಟ್ಟ ನಿರೀಕ್ಷಣಾ ವರದಿಯನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತನಿಖೆಯ ಕಾಲಕ್ಕೆ ನನಗೆ 1 ನೇ ಆರೋಪಿಯು ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂದಪಡದೇ ಇರುವದು ಕಂಡು ಬಂದರೂ ಸಹ ನಾನು ಉದ್ದೇಶಪೂರ್ವಕವಾಗಿ ಪಿರ್ಯಾದಿದಾರಿಗೆ ಅನುಕೂಲ ಮಾಡಲು ಮತ್ತು ವಿಮೆ ಪರಿಹಾರ ಪಡೆಯಲು 1 ನೇ ಅರೋಪಿಯ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.